# ಕಣ್ಣಿನ ಕಸ

ಬೈಬಲ್‌ನಲ್ಲಿ ಯೇಸು ಮತ್ತೆ ಮತ್ತೆ ಹೇಳುವ ಮಾತೆಂದರೆ ದೇವರಿನಿಂದ ಸೃಷ್ಟಿಸಲ್ಪಟ್ಟ ಮಾನವನಿಗೆ ಎಲ್ಲ ರೀತಿಯ ಬದುಕುವ ಅವಕಾಶಗಳು ಕೊಡಲ್ಪಡುತ್ತವೆ ಎಂಬುದಾಗಿ. ಮಾನವನು ಸೃಷ್ಟಿಸಿದ ಅವನಿಗೆ ಏನನ್ನು ಕೊಡಬೇಕು ಮತ್ತು ಏನನ್ನು ಕೊಡಬಾರದು ಎಂಬುದರ ಅರಿವಿದೆ. ತನ್ನ ಸುತ್ತಲೂ ಅಸಹಾಯಕವಾಗಿ ಸೇರಿದ ನೊಂದವರಿಗೆ, ಬೆಂದವರಿಗೆ ಸಾಂತ್ವನ ನೀಡಲು ಆತ್ಮವಿಶ್ವಾಸ ತುಂಬಲು ಯೇಸು ಆರಿಸಿಕೊಂಡ ಮಾರ್ಗವೆಂದರೆ ಬೋಧನೆ. ತಾನು ಹೋದೆಡೆಯಲ್ಲೆಲ್ಲಾ ಜಾತ್ರೆಯಂತೆ ಸೇರುತ್ತಿದ್ದ ಜನರಿಗೆ ತನ್ನ ವಿಚಾರಗಳನ್ನು ತಲುಪಿಸಲು ಸಾಮತಿಯನ್ನು ಬಳಸಿಕೊಳ್ಳುತ್ತಾನೆ. ಕತೆಯ ರೂಪದ ಆ ಮಾತುಗಳು ಅಲೌಕಿಕತೆ ಹಾಗೂ ಲೌಕಿಕ ವ್ಯವಹಾರಗಳನ್ನು ಬೆಸೆಯುವ ನೀತಿಕತೆಗಳಾಗಿದ್ದವು. ಸಾಮ್ಯತೆಯನ್ನು ಹೊಂದಿದ್ದರಿಂದಲೇ ಸಾಮತಿಯೆಂದೂ, ಇಂಗ್ಲಿಷ್‌ನಲ್ಲಿ parable ಎಂದು ಕರೆಯಲಾಯಿತು. ಬೈಬಲ್‌ನಲ್ಲಿ ಇಂತಹ ಸಾಮತಿಗಳು ಸಂಕ್ಷಿಪ್ತವಾಗಿಯೊ, ದೀರ್ಘವಿವರಗಳಲ್ಲಿಯೊ ಕಾಣಸಿಗುತ್ತವೆ.

ಅವನ ಬೋಧನೆಗಳ ಸಾಮಾನ್ಯವಾಗಿ 'ಕೇಳಿರಿ, ಕೊಡುವರು. ಹುಡುಕಿರಿ, ಸಿಕ್ಕುವುದು. ಬಾಗಿಲು ತಟ್ಟಿರಿ, ತೆರೆಯುವುದು– ಈ ರೀತಿಯ ಮನುಷ್ಯ ಪ್ರಯತ್ನಗಳನ್ನು ಕುರಿತು ಹೇಳುತ್ತವೆ. ಮಾನವನಿಗೆ ಬೇಕಾದ ವೈಚಾರಿಕ ಮನಸ್ಥಿತಿಯನ್ನು ಕುರಿತಂತೆ ಅವನು ಹೇಳುತ್ತಿದ್ದ 'ಬಂಡೆಯ ಮೇಲೆ ಕಟ್ಟಿದ ಮನೆ ಭದ್ರವಾಗಿರುವುದಲ್ಲದೆ, ಮರಳಿನ ಮೇಲೆ ಕಟ್ಟಿದ ಮನೆ ಭದ್ರವಾಗಿರಲಾರದು' ಎಂಬ ಮಾತು ಇಂದಿಗೂ ಒಪ್ಪುವಂತದ್ದಾಗಿದೆ.

ಯೇಸು ತನ್ನ ಬೋಧನೆಗಳನ್ನು ಎತ್ತರವಾದ ಬೆಟ್ಟದ ಮೇಲೆ, ಪರ್ವತದ ಮೇಲೆ ನಿಂತು ಮಾಡಿದನೆಂಬ ಪ್ರತೀತಿ. ಅಂತಹ ಒಂದು ಸಂದರ್ಭದಲ್ಲಿ ಅವನು ಹೇಳಿದ ಸಾಮತಿ ಕುರುಡ ಕುರುಡನಿಗೆ ದಾರಿ ತೋರುವುದು ಸಾಧ್ಯವೇ? ಗುರುವಿಗಿಂತ ಶಿಷ್ಯ ದೊಡ್ಡವನಲ್ಲ, ಆದರೆ ಉತ್ತಮವಾದ ಕಲಿಕೆಯು ಅವನನ್ನು ಗುರುವನ್ನಾಗಿ ಮಾಡುವುದು. ಇದನ್ನು ಅಡಿಗರು ತಮ್ಮ ಕವಿತೆಯಲ್ಲಿ ಭವಿಷ್ಯದ ಅನಿಶ್ಚಯತೆಯನ್ನಾಗಿ ಕಂಡು 'ಹೆಳವನ ಹೆಗಲ ಮೇಲೆ ಕುರುಡು ಕೂತಿದ್ದಾನೆ, ದಾರಿ ಸಾಗುವದೆಂತೊ ನೋಡಬೇಕು' ಎಂದು ಅಭಿವ್ಯಕ್ತಿಸುತ್ತಾರೆ. ಈ ಸಂದರ್ಭದಲ್ಲಿ ಯೇಸು ಬಳಸುವ ಸಾಮತಿಯೆಂದರೆ 'ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಕುರಿತು ಯೋಚಿಸುವುದೇಕೆ. ಕಪಟಿಯೇ, ಮೊದಲು ನಿನ್ನ ಕಣ್ಣಿನಲ್ಲಿರುವ ಪೊರೆಯನ್ನು ತೆಗೆದು ಹಾಕು, ಆನಂತರ ನಿನ್ನ ಸಹೋದರನ ಕಣ್ಣಿನ ರವೆಯನ್ನು ತೆಗೆ. ಆಗ ನೋಟ ನಿಚ್ಚಳವಾಗುವುದು'. ಈ ಮಾತು ನಾವು ಸಾಧಾರಣವಾಗಿ ಬಳಸುವ ಲೌಕಿಕದ ಮಾತು 'ನಿನ್ನ ಊಟದ ಎಲೆಯಲ್ಲಿ ಬಿದ್ದ ಕೀಟವನ್ನು ತೆಗೆಯದೆ, ಬೇರೆಯವರ ಎಲೆಯನ್ನು ನೋಡುವುದೇಕೆ' ಎಂಬ ಮಾತನ್ನು ಹೋಲುತ್ತದೆ. ಈ ಮಾತಿನ ಹಿನ್ನೆಲೆಯಲ್ಲಿ ಯೇಸು ಹೇಳುವುದೇನೆಂದರೆ ಯಾರು ತನ್ನ ಮಾತುಗಳನ್ನು ಕೇಳಿ ತಪ್ಪದೆ ನಡೆಯುತ್ತಾರೋ ಅವರಿಗೆ ಭವಿಷ್ಯವಿದೆ. ಯಾರು ಕೇಳಿ ನಡೆಯದಿರುತ್ತಾರೋ ಅವರು ಮರಳಿನ ಮೇಲೆ ಕಟ್ಟಿದ ಮನೆಯಂತೆ ಒಳಗೊಳಗೆ ಕುಸಿದು ಹೋಗುತ್ತಾರೆ.

ಮುಂದುವರಿದು ಪ್ರತಿ ಮರದ ಗುಣವು ಅದರ ಫಲದಿಂದಲೇ ತಿಳಿಯುತ್ತದೆ. ಮುಳ್ಳುಗಿಡದಲ್ಲಿ ಅಂಜೂರದ ಹಣ್ಣನ್ನು ಕೀಳಲಾಗುವುದಿಲ್ಲ. ಹಾಗೆಯೇ, ಮುಳ್ಳುಪೊದೆಗಳಲ್ಲಿ ದ್ರಾಕ್ಷಿ ಹಣ್ಣುಗಳನ್ನು ಪಡೆಯಲಾಗುವುದಿಲ್ಲ. ಒಳ್ಳೆಯವನು ತನ್ನ ಹೃದಯದ ಬೊಕ್ಕಸದೊಳಗಿನಿಂದ ಒಳ್ಳೆಯದನ್ನೇ ನೀಡುತ್ತಾನೆ. ಕೆಟ್ಟವನು ತನ್ನ ಹೃದಯದ ಬೊಕ್ಕಸದೊಳಗಿನಿಂದ ಕೆಟ್ಟದನ್ನೇ ನೀಡುತ್ತಾನೆ. ಹೃದಯದಲ್ಲಿ ತುಂಬಿರುವುದೇ ಬಾಯಿಂದ ಹೊರಬರುತ್ತದೆ. ಈ ರೀತಿಯಲ್ಲಿ ಯೇಸು ಗುಲಾಮರಾಗಿ ಕತ್ತಲಿನ ಕೂಪದಲ್ಲಿ ನರಳುವ ಯಹೂದಿಗಳಿಗೆ ಸುಲಭವಾದ ಸರಳವಾದ ನೇರವಾದ ಲೌಕಿಕದ ಸಂಗತಿಗಳಿಂದಲೇ ಬೆಳಕು ಚೆಲ್ಲುವ ಬೋಧನೆಗಳನ್ನು ನೀಡಿದ.

ತಾನು ದೇವಪುತ್ರನೆಂದು, ಕೆಲವು ಬಾರಿ ತಾನೇ ದೈವವೆಂದು, ಮನುಕುಲದ ಏಳಿಗೆಗಾಗಿ ಬಂದ ಹರಕೆಯ ಕುರಿಯೆಂದು ಹಲವು ಕಡೆ ಯೇಸು ಹೇಳಿಕೊಂಡಿದ್ದಾನೆ. ಅವನ ಸರಳ ಬೋಧನೆಗಳಿಗೂ ವಚನ ಸಾಹಿತ್ಯದ ಆಶಯಗಳಿಗೂ ಹಲವು ಸಾಮ್ಯತೆಗಳಿವೆ. ಬಯಲಿನಲ್ಲಿ ಆಲಯವನ್ನು, ದೇಹವನ್ನೇ ದೇಗುಲವಾಗಿ ಕಂಡ ಶಿವಶರಣರು ಸಹ ಸರಳ, ಸುಂದರವಾದ ಆಶಯಗಳನ್ನು ವಚನಗಳಲ್ಲಿ ಬಿಂಬಿಸಿದರು. ಶಿವಶರಣೆ ಅಮುಗೆರಾಯಮ್ಮನ ವಚನಗಳಲ್ಲಿ ಸಮಾಜ ವಿಮರ್ಶೆ ತೀಕ್ಷ್ಣವಾಗಿ, ಕಟುವಾಗಿ ಕಂಡು ಬರುತ್ತದೆ. ನಿಷ್ಠುರವಾದಿಯಾದ ಆಕೆ ಜ್ಞಾನಿಗಳೆಂದು ತಿರುಗುವ, ತಮ್ಮನ್ನೇ ತಿದ್ದಿಕೊಳ್ಳಲಾರದೆ ಲೋಕವನ್ನು ತಿದ್ದ ಹೊರಟ ಡಾಂಭಿಕ ಭಕ್ತರನ್ನು ತನ್ನ ವಚನಗಳಲ್ಲಿ ಟೀಕಿಸುತ್ತಾಳೆ. ಆಕೆಯ ಒಂದು ವಚನ ಮೇಲೆ ಹೇಳಿದ ಯೇಸುವಿನ ಒಂದು ಸಾಮತಿಯನ್ನು ಹೋಲುತ್ತದೆ. ಯೇಸು 'ಕಣ್ಣಲ್ಲಿರುವ ಪೊರೆ' ಎಂದು ಆ ಸಾಮತಿಯಲ್ಲಿ ಮಾತನಾಡಿದರೆ ರಾಯಮ್ಮ ಅದನ್ನು ಎನ್ನ 'ಕಣ್ಣೊಳಗಿನ ಕಟ್ಟಿಗೆ' ಎಂದು ಮಾತನಾಡುತ್ತಾಳೆ. ಅವಳು ಹೇಳುವಂತೆ ಅದು ಬೇರೆಯವರ ಕಣ್ಣಿನ ಕಸವನ್ನ. ಅದು ತಾನೇ ತೆಗೆಯಬೇಕಾದ ತನ್ನ ಕಣ್ಣೊಳಗಿನ ಕಸವೆಂಬುದಾಗಿದೆ. 'ಎನ್ನ ಕಣ್ಣೊಳಗಿನ ಕಟ್ಟಿಗೆಯ ಮುರಿವವರನಾರನೂ ಕಾಣೆ, ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ' ಎಂದು ಹೇಳುತ್ತಾಳೆ. ಈ ಸಮಸ್ಯೆಗೆ ಅವಳು ಕೊಡುವ ಉತ್ತರ 'ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು. ಎನ್ನ ಕಾಲೊಳಗಣ ಮುಳ್ಳು ನಾನೆ ತೆಗೆಯಬೇಕು ಎಂಬುದಾಗಿದೆ. ಯೇಸು ಬೈಬಲಿನಲ್ಲಿ ಹೇಳಿಕೊಳ್ಳುವಂತೆ ದೀನದಲಿತರ, ದುರ್ಬಲರ ಪಾಲಿನ ಬೆಳಕು ತಾನೇ ಎಂದು. ಶರಣರು ಗುರುತಿಸುವಂತೆ ಗುರು ನಿಮಿತ್ತ ಮಾತ್ರ. ಆ ಗುರುವು ತೋರಿದ ದಾರಿಯಲ್ಲಿ ನಡೆದು ತನ್ನ ಉನ್ನತಿಯನ್ನು ತಾನೇ ಕಂಡುಕೊಳ್ಳಬೇಕು. ತನ್ನಲ್ಲಿನ ದೌರ್ಬಲ್ಯವನ್ನು, ಇಹ–ಪರಗಳ ಸಂಕಟವನ್ನು, ನಡೆ–ನುಡಿಗಳ ಅಂತರವನ್ನು ತನ್ನಲ್ಲಿನ ನಂಬುಗೆ ಆತ್ಮವಿಶ್ವಾಸದಿಂದಲೇ ಗೆಲ್ಲಬೇಕು. ದೇವರ ದಾಸಿಮಯ್ಯ ಶಿಷ್ಯ ಗುರುವಾಗುವ ಪರಿಯನ್ನು ಕುರಿತು 'ಗುರುವಿನ ಒಡಲ ಬಗೆದು ಹುಟ್ಟಿದಾತ, ಒಡನೆ ಗುರುಸಹಿತ ನಿಂದ ನಿಲವನೇನೆಂಬೆನಯ್ಯಾ' ಎನ್ನುತ್ತಾನೆ. ಇದೇ ಯೇಸು ಹೇಳುವ 'ಕಣ್ಣಿನಲ್ಲಿನ ಪೊರೆ ತೆಗೆಯುವ, ರಾಯಮ್ಮ ಹೇಳುವ 'ಕಣ್ಣೊಳಗಿನ ಕಟ್ಟಿಗೆಯ ಮುರಿಯುವ' ತನ್ನನ್ನು ತಾನು ಕಂಡುಕೊಳ್ಳುವ ಬೆಳಕಿನ ದಾರಿಯಾಗಿದೆ.

■ **ಅಮೃತಮತಿ**

## ಮಾತೇ ಮುತ್ತು

- ಜನತಂತ್ರವು ಯಶಸ್ವಿಯಾಗಬೇಕಾದರೆ ಸಮಾಜದಲ್ಲಿ ಕಣ್ಣು ಕೋರೈಸುವ ಅಸಮಾನತೆ ಇರಬಾರದು.

  —ಬಿ.ಆರ್. ಅಂಬೇಡ್ಕರ್

- ಸತ್ಯದ ವಿಶ್ವರೂಪದೆದುರು ತಮಾಷೆ, ಸ್ವವಿಮರ್ಶೆ, ವಿನಯದ ಗುಂಪನ್ನು ಕಟ್ಟಿಕೊಳ್ಳದಿದ್ದರೆ ನಾವು ನಾಶವಾಗುತ್ತೇವೆ.

  —ಪಿ. ಲಂಕೇಶ್

- ಜೀವನದಲ್ಲಿ ಬುದ್ಧಿವಂತಿಕೆಯೊಂದೇ ಸಾಲದು. ತಾಳ್ಮೆ ಮತ್ತು ವಿವೇಚನೆ ಕೂಡ ಮುಖ್ಯ.

  —ವಿನೋಬಾ ಭಾವೆ.

- ಪ್ರೀತಿಯು ಒಡೆತನವನ್ನು ಪ್ರತಿಪಾದಿಸುವುದಿಲ್ಲ. ಸ್ವಾತಂತ್ರ್ಯವನ್ನು ನೀಡುತ್ತದೆ.

  —ರವೀಂದ್ರನಾಥ್ ಟ್ಯಾಗೋರ್.

- ಭಕ್ತಿ ಒಳ್ಳೆಯ ಮಾತುಗಳನ್ನಾಡಿಸಿದರೆ ಸಾಲದು. ಅದು ಒಳ್ಳೆಯ ಕೆಲಸಗಳನ್ನು ಮಾಡಿಸಬೇಕು.

  —ಡಿ.ವಿ.ಜಿ.

- ಬೇರೆಯವರಿಗೆ ಸ್ವಾತಂತ್ರ್ಯ ನೀಡದವರು ಸ್ವತಃ ಸ್ವಾತಂತ್ರ್ಯ ಅನುಭವಿಸಲು ಅನರ್ಹರು.

  —ಅಬ್ರಹಾಂ ಲಿಂಕನ್